ದಿನಾಂಕಃ 10.07.2025

ಅಸಲುದಾವಃ 121/2022

ಡಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಾನು ಎಸ್.ಎಸ್.ಎಲ್.ಸಿವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲೀಷ್ ಬರುವುದಿಲ್ಲ. ನಾನು ಪೇಂಟಿಂಗ್ ಕೆಲಸ ಮಾಡುತ್ತೇನೆ. ಸಾಕ್ಷಿಗೆ ಅವರ ವಕಾಲತ್ ಅನ್ನು ತೋರಿಸಿ ಈ ಸಹಿ ಯಾರದು ಎಂದು ಸೂಚಿಸಿದಾಗ ಸಾಕ್ಷಿ ಸದರಿ ಸಹಿಯನ್ನು ನೋಡಿ ನನ್ನ ಸಹಿ ಎಂದು ಗುರುತಿಸಿರುತ್ತಾರೆ. ಸಾಕ್ಷಿಗೆ ದಿ.19.03.2024 ರ ಪ್ರಮಾಣ ಪತ್ರ ತೋರಿಸಿ ಈ ಸಹಿ ಯಾರದು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ನನ್ನದಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಲಿಖಿತ ಹೇಳಿಕೆಯನ್ನು ತೋರಿಸಿ ಅದರಲ್ಲಿ ಇರುವ ಸಹಿ ಯಾರದು ಎಂದು ಸೂಚಿಸಿದಾಗ ಸಾಕ್ಷಿ ಸಹಿಯನ್ನು ನೋಡಿ ತನ್ನದೇ ಎಂದು ಗುರುತಿಸಿರುತ್ತಾರೆ. ಸಾಕ್ಷಿಗೆ ಮುಖ್ಯ ಸಾಕ್ಷ್ಯಾ ಪ್ರಮಾಣ ಪತ್ರ ತೋರಿಸಿ ಸಹಿ ಯಾರದು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಸಹಿಯನ್ನು ನೋಡಿ ತನ್ನದೇ ಎಂದು ಗುರುತಿಸಿರುತ್ತಾರೆ. ಸಾಕ್ಷಿಗೆ ನಿಪಿ3 ದಾಖಲಾತಿಯನ್ನು ತೋರಿಸಿ ಸದರಿ ಸಹಿ ಯಾರದು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಸಹಿಯನ್ನು ನೋಡಿ ತನ್ನದೇ ಸಹಿ ಎಂದು ಗುರುತಿಸಿರುತ್ತಾರೆ. ಈ ಕೇಸಿನಲ್ಲಿ ನನಗೆ ಸಮನ್ಸ್ ಬಂದಿತ್ತು ಎಂದರೆ ಸರಿ. ಈ ಕೇಸಿನದಲ್ಲಿ ಏನು ತಕರಾರು ಹಾಕಿದ್ದೀರಿ ಎಂದು ಗೊತ್ತ ಎಂದರೆ ಸಾಕ್ಷಿ ಸಹಿ ನನ್ನದಲ್ಲ ಎಂದು ಹಾಕಿದ್ದೇನೆ ಎಂದು ಉತ್ತರಿಸುತ್ತಾರೆ. ಸಮನ್ಸ್ ಬಂದ ನಂತರ ನೀವೇನಾದರು ಸಹಿ ನನ್ನದಲ್ಲ, ಸುಳ್ಳು ಕೇಸು ಹಾಕಿದ್ದಾರೆ ಎಂದು ಸಂಬಂಧಪಟ್ಟ ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಹಾಗೆಯೇ ನ್ಯಾಯಾಲಯದಲ್ಲಿಯೂ ಯಾವುದೆ ಖಾಸಗಿ ದೂರು ಸಲ್ಲಿಸಿರುವುದಿಲ್ಲ. ದಿ.18.11.2020 ರಲ್ಲಿ ನೀವು ವಾದಿ ಮಹದೇವರವರಿಂದ ರೂ.10 ಲಕ್ಷಗಳನ್ನು ಸಾಲವಾಗಿ ಪಡೆದು ಅದೇ ದಿನ ಆನ್ ಡಿಮ್ಯಾಂಡ್ ಪ್ರೊನೋಟ್ ಮತ್ತು ಹಣ ಸಂದ ರಶೀದಿ ಬರೆದು ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ಪರಿಚಯವಿದ್ದ ಮಂಚೇಗೌಡ ಮತ್ತು ಸಿದ್ದೇಗೌಡರವರನ್ನು ಕರೆದುಕೊಂಡು ಬಂದು ಅವರ ಸಮುಖದಲ್ಲಿ ನೀವು ರೂ.10 ಲಕ್ಷಗಳನ್ನು ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಹಣ ತೆಗೆದುಕೊಂಡ ನಂತರ ನೀವೇ ಪತ್ರ ಬರಹಗಾರರಾದ ಪ್ರಶಾಂತ್ ಅವರಿಂದ ಮಹದೇವ್ ಅವರ ಮನೆಯ ಹತ್ತಿರ ಆನ್ ಡಿಮ್ಯಾಂಡ್ ಪ್ರೊನೋಟ್ ಮತ್ತು ಹಣ ಸಂದ ರಶೀದಿಯನ್ನು ಬರೆಸಿಕೊಟ್ಟಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ವಾದಿಯಿಂದ ಮೇಲೆ ಹೇಳಿದ ಹಣವನ್ನು ಪಡೆದು ಸಾಕ್ಷಿಗಳ ಸಮಕ್ಷಮ ಪತ್ರ

ಬರೆದುಕೊಟ್ಟಿದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

2. ಮೈಸೂರಿನ ಅಂಚೇಗ್ರಾಮ ಪ್ರಂಚಾಯಿತಿ ವ್ಯಾಪ್ತಿಯಲ್ಲಿ ಒಂದು ನಿವೇಶನವನ್ನು ಯಾವಾಗ ಖರೀದಿಸಿದ್ದೀರಿ ಎಂದರೆ ಸಾಕ್ಷಿ ದಿನಾಂಕ ಮರೆತು ಹೋಗಿದೆ ಎಂದು ಉತ್ತರಿಸುತ್ತಾರೆ. ನಿಮಗೆ ನೆನಪಿದ್ದರೂ ಸಹ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿವೇಶನವನ್ನು ನೀವು ದಿ.23.11.2020 ರಂದು ಖರೀದಿಸಿದ್ದೀರಿ, ನಿಪಿ3 ನಿಮ್ಮ ನಿವೇಶನದ ಕ್ರಯ ಪತ್ರ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೀವು ನಿವೇಶನ ಖರೀದಿಸುವ ಉದ್ದೇಶದಿಂದ ಮತ್ತು ಗೃಹ ಕೃತ್ಯದ ಖರ್ಚಿಗಾಗಿ ವಾದಿಯಿಂದ ದಿ.18.11.2020 ರಂದು ರೂ.10 ಲಕ್ಷಗಳನ್ನು ಮಾಸಿಕ ಶೇಕಡ 1.5 ಬಡ್ಡಿಯಂತೆ ಸಾಲವಾಗಿ ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ವಾದಿಯವರು ನಿಮಗೆ ಸುಮಾರು ವರ್ಷಗಳಿಂದ ಪರಿಚಯ ಅವರು ನಿಮಗೆ ಪೇಂಟಿಂಗ್ ಕೆಲಸ ಕೊಟ್ಟಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಪರಿಚಯದ ಆದಾರದ ಮೇಲೆ ವಾದಿ ಸಾಕ್ಷಿದಾರರ ಸಮಕ್ಷಮ ರೂ.10 ಲಕ್ಷಗಳನ್ನು ನಿಮಗೆ ಸಾಲವಾಗಿ ಕೊಟ್ಟು ಆನ್ ಡಿಮ್ಯಾಂಡ್ ಪ್ರೋನೋಟ್ ಬರೆಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಇಲ್ಲ, ಸುಳ್ಳು ಎಂದು ಉತ್ತರಿಸುತ್ತಾರೆ. ನಿಪಿ1 ರಲ್ಲಿ ಇರುವ ಮತ್ತು ನಿಪಿ3 ರಲ್ಲಿ ಇರುವ ಸಹಿ ಒಂದೇ ತರ ಇದೆ ಎಂದರೆ ಸಾಕ್ಷಿ ಇಲ್ಲ, ನಿಪಿ3 ರಲ್ಲಿ ಇರುವ ಸಹಿ ನನ್ನದು ಎಂದು ಉತ್ತರಿಸುತ್ತಾರೆ. ಎರಡೂ ಪತ್ರದ ಸಹಿಗಳು ಒಂದೇ ರೀತಿ ಇದೆ, ಎಲ್.ಬಿ. ಮಂಜುನಾಥ ಎಂದು ನಿಪಿ 1 ರಲ್ಲಿ ಸಹಿ ಮಾಡಿದ್ದು ನಿಪಿ3 ರಲ್ಲಿ ಮಂಜುನಾಥ ಎಲ್.ಬಿ ಎಂದು ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿ ಮಂಜುನಾಥ.ಎಲ್.ಬಿ ನನ್ನ ಸಹಿ ಎಂದು ಉತ್ತರಿಸುತ್ತಾರೆ. ವಾದಿಯಿಂದ ಪಡೆದುಕೊಂಡಿರುವ ಹಣವನ್ನು ವಾಪಸ್ಸು ಕೊಡದೆ ಮೋಸ ಮಾಡಬೇಕು ಎಂಬ ಉದ್ದೇಶದಿಂದ ನಿಪಿ1 ರಲ್ಲಿ ಇರುವ ಸಹಿ ನನ್ನದಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಪಿ1 ಕ್ಕೆ ನೀವು ಸಹಿ ಅಲ್ಲದೆ ಹೆಬ್ಬೆಟ್ಟಿನ ಗುರುತನ್ನೂ ಸಹ ಹಾಕಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

3. ನಿಮ್ಮ ತಕರಾರಿನಲ್ಲಿ ಆ ಸಹಿ ನನ್ನದಲ್ಲ ಅದನ್ನು ವೈಜ್ಞಾನಿಕ ಪರೀಕ್ಷೆಗೆ ಕಳುಹಿಸಬಹುದು ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ಹೇಳಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ತಕರಾರಿನಲ್ಲಿ ಆ ರೀತಿ ಏನು ಹೇಳಿಲ್ಲ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ಉತ್ತರಿಸುತ್ತಾರೆ. ಸಹಿ ಮತ್ತು ಹೆಬ್ಬೆಟ್ಟಿನ ಗುರುತು ನಿಮ್ಮದೇ ಆಗಿರುವ ಕಾರಣ ನೀವು ಆ ರೀತಿ ಹೇಳಿಲ್ಲ ಎಂದರೆ ಸಾಕ್ಷಿ ನನ್ನದಲ್ಲ ಎಂದು ಉತ್ತರಿಸುತ್ತಾರೆ. ದಿ.18.11.2020 ರಲ್ಲಿ ನೀವು ರೂ,10 ಲಕ್ಷ ಹಣ ಪಡೆದುಕೊಂಡ ನಂತರ ಸುಮಾರು ಬಾರಿ ವಾದಿ ನಿಮ್ಮ ಬಳಿ ಬಂದು ಅಸಲು ಮತ್ತು ಬಡ್ಡಿ ಹಣವನ್ನು ಕೇಳಿದರೂ ಸಹ ನೀವು ಕೊಟ್ಟಿರುವುದಿಲ್ಲ, ಅಂತಿಮವಾಗಿ ದಿ.09.05.2022 ರಂದು ನಿಮ್ಮ ಬಳಿ ಪುನಃ ಬಂದು ಕೇಳಿದರು ಎಂದರೆ ಸಾಕ್ಷಿ ಇಲ್ಲ, ನಾನು

ಈಸಿಕೊಂಡರೆ ತಾನೆ ಬಂದು ಕೇಳುವುದು ಎಂದು ಉತ್ತರಿಸುತ್ತಾರೆ. ವಾದಿ ನ್ಯಾಯಾಲಯಕ್ಕೆ ಸರಿಯಾದ ಶುಲ್ಕ ಪಾವತಿಸಿಲ್ಲ ಎಂದು ಪ್ರಮಾಣ ಪತ್ರದಲ್ಲಿ ಹೇಳಿದ್ದೀರಿ, ಪ್ರತ್ಯೇಕವಾದ ಅರ್ಜಿಯನ್ನು ಸಲ್ಲಿಸಿದ್ದೀರ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ಹೇಳಿ ಸಲ್ಲಿಸಿದ್ದೇನೆ ಎಂದು ಉತ್ತರಿಸುತ್ತಾರೆ. ವಾದಿ ಸರಿಯಾಗಿ ನ್ಯಾಯಾಲಯದ ಶುಲ್ಕ ಪಾವತಿಸಿರುವುದರಿಂದಲೇ ನೀವು ಪ್ರತ್ಯೇಕ ಅರ್ಜಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ಹೇಳಿದ್ದೇನೆ ಎಂದು ಉತ್ತರಿಸುತ್ತಾರೆ. ವಾದಿ ದಿ.09.05.2022 ರಂದು ನಿಮ್ಮನ್ನು ಅಂತಿಮವಾಗಿ ಬಂದು ಹಣ ಕೇಳಿದರೂ ನೀವು ಕೊಡದ ಕಾರಣ ಈ ದಾವ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಬಂದು ಕೇಳಿಲ್ಲ ಎಂದು ಉತ್ತರಿಸುತ್ತಾರೆ. ವಾದಿಯಿಂದ ಪಡೆದುಕೊಂಡಿರುವ ರೂ.10 ಲಕ್ಷಕ್ಕೆ ಬಡ್ಡಿ ರೂ.2 ಲಕ್ಷದ 75 ಸಾವಿರ ಒಟ್ಟು 12 ಲಕ್ಷದ 75 ಸಾವಿರ ಈ ದಾವ ಹಾಕುವ ಕಾಲಕ್ಕೆ ಬಾಕಿ ಉಳಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ನಾನು ಈಸಿಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ವಾದಿಯಿಂದ ಪಡೆದುಕೊಂಡಿರುವ ಹಣವನ್ನು ಕೊಡಬೇಕಾಗುತ್ತದೆ ಎಂದು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗಳ ಸಮಕ್ಷಮ ಆನ್ ಡಿಮ್ಯಾಂಡ್ ಪ್ರೊನೋಟ್ ಮತ್ತು ಹಣ ಸಂದ ರಶೀದಿಗೆ ಹಣ ಪಡೆದ ನಂತರ ಸಹಿ ಮತ್ತು ಹೆಬ್ಬೆಟ್ಟಿನ ಗುರುತು ಹಾಕಿದ್ದರೂ ಸಹ ಈಗ ಮೇಲಿನ ರೀತಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನಾನು ಈಸಿಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ1ರಲ್ಲಿ ಇರುವ ಸಹಿ ಮತ್ತು ಹೆಬ್ಬೆಟ್ಟಿನ ಗುರುತು ನನ್ನದಲ್ಲ ಎಂದು ವೈಜ್ಞಾನಿಕ ಪರೀಕ್ಷೆ ಮೂಲಕ ತಿಳಿದುಕೊಳ್ಳಲು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಲು ತೊಂದರೆ ಇದೆಯ ಎಂದರೆ ಸಾಕ್ಷಿ ಕಳುಹಿಸಿ ಎಂದು ಉತ್ತರಿಸುತ್ತಾರೆ. ಸದರಿ ವೈಜ್ಞಾನಿಕ ಪರೀಕ್ಷೆಗೆ ನಿಮ್ಮ ಕಡೆಯಿಂದ ಕಳುಹಿಸಲು ಏನು ತೊಂದರೆ ಇಲ್ಲವಾ ಎಂದರೆ ಸಾಕ್ಷಿ ಕಳುಹಿಸುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.